ದಿನಾಂಕಃ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.
ಪಾಟೀ ಸವಾಲು - ಶ್ರೀ. ಟಿ.ಜಿ.ಎಸ್ ವಕೀಲರಿಂದ ಆರೋಪಿ ಪರ

ದೂರನ್ನು ಮತ್ತು ತಿಳುವಳಿಕೆ ನೋಟೀಸು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ದಾಖಲೆಗಳಲ್ಲಿ ತಿಳಿಸಿರುವ ಮಾಹಿತಿಗಳು ಸರಿ ಇರುತ್ತದೆ. ಆರೋಪಿ ನನಗೆ 3-4 ವರುಷದಿಂದ ಪರಿಚಯ ಇರುತ್ತಾರೆ. ದುರ್ಗಾ ವೈನ್ಸ ನಲ್ಲಿ ಸುಮಾರು 3-4 ಜನರು ಕೆಲಸ ಮಾಡುತ್ತಾರೆ. ಅವರುಗಳ ಪೈಕಿ ಆರೋಪಿ ಕೆಲಸ ಮಾಡುತ್ತಿದ್ದ ಉಳಿದ ಹೆಸರುಗಳು ನನಗೆ ನೆನಪಿಲ್ಲ. ನಾನು ಮ್ಯಾನೇಜರ್ ಆಗುವ ಪೂರ್ವದಲ್ಲಿ ಕೆಲವು ಕೆಲಸಗಾರರು ಕೆಲಸ ಮಾಡುತ್ತಿದ್ದರು ಅದರಲ್ಲಿ ಆರೋಪಿ ಸಹ ಇದ್ದರು. 2022 ನೇ ಇಸವಿಯಲ್ಲಿ ನಾನು ಲೀಸ್ ಗೆ ಪಡೆದಿರುತ್ತೇನೆ ಅದು ಒಂದು ವರುಷದ ಅವಧಿಯಲ್ಲಿ ಲೀಸ್ ನ್ನು ತೊರೆದಿರುತ್ತೇವೆ.

ಆರೋಪಿ ಪೂರ್ವದಲ್ಲಿ ಎಷ್ಟು, ಎಷ್ಟು ಹಣ ಮತ್ತು ಯಾವ ದಿನಾಂಕ ಪಡೆದಿರುತ್ತಾರೆ ಎಂದು ನನಗೆ ನಿಖರವಾಗಿ ನೆನಪಿಲ್ಲ. ಆರೊಪಿ 2,-3 ಲಕ್ಷ ಗಳಂತೆ 2-3 ಬಾರಿ ನಗದಾಗಿ ಪಡೆದಿರುತ್ತಾರೆ. ನಾನು ಬಾರಿ ನಲ್ಲಿ ಸ್ಟಾಕ್ ಆಗಿ ಇಟ್ಟಿದ್ದ ಹಣವನ್ನು ಆರೋಪಿಗೆ ನೀಡಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ ಎಂದರೆ ಸರಿ. ಸದರಿ ಆದಾಯ ತೆರಿಗೆ ದಾಖಲೆಗಳಲ್ಲಿ ನಾನು ಯಾರಿಗೆ ಹಣ ನೀಡಿರುತ್ತೇನೆ ಮತ್ತು ನನಗೆ ಯಾರ ಕಡೆಯಿಂದ ಹಣ ಬರಬೇಕೆಂದು ತಿಳಿಸಿರುತ್ತೇವೆ ಎಂದರೆ ಸರಿ. ಸದರಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಆರೋಪಿ ರೂ 8 ಲಕ್ಷ ಕೇಳಿದ ದಿನಾಂಕ ನೆನಪು ಇಲ್ಲ. ಆರೋಪಿ ಕೇಳಿದ ಎಷ್ಟು ದಿನಕ್ಕೆ ಹಣ ನೀಡಿರುತ್ತೇನೆಂದರೆ ನನಗೆ ನೆನಪಿಲ್ಲ. ಸದರಿ ಹಣ ಸ್ಟಾಕಿಗಾಗಿ ಇಟ್ಟ ಹಣ ಆಗಿರುತ್ತದೆ. ಹಣವನ್ನು ನಾನು ಆರೋಪಿಗೆ ಮನೆಯಲ್ಲಿ ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ಅವರ ಮನೆಯಲ್ಲಿ ನೀಡಿರುವುದಿಲ್ಲ. ಹಣ ಕೊಡುವ ಸಂದರ್ಭದಲ್ಲಿ ನಾನು ಒಬ್ಬನೇ ಇದ್ದೆ. ಆರೋಪಿ ಕೆಲಸಕ್ಕೆ ಸೇರಿದಾಗ ಆತನಿಗೆ ಸೇರಿದ ಬ್ಯಾಂಕ್ ಖಾತೆ ಇದೆಯೋ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನನ್ನು ಆರೋಪಿಗೆ ನೀಡಿದ ಹಣ ಸ್ಟಾಕು ಮತ್ತು ಬ್ಯಾಂಕಿನಿಂದ ತೆಗೆದ ಹಣವಾಗಿರುತ್ತದೆ.

ನನಗೆ ಎಷ್ಟು ವ್ಯಾಪಾರ ಆಗಿರುತ್ತದೆ ಮತ್ತು ಯಾರಿಗೆ ಹಣ ನೀಡಿರುತ್ತೇವೆ ಆಡಿಟ್ ದಾಖಲೆ ಇರುತ್ತದೆ ಎಂದರೆ ಸರಿ. ಸದರಿ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಒಂದು ವಾರದ ನಂತರ ನಾನು ಅರೋಪಿಗೆ ಹಣವನ್ನು ಹಿಂದಿರುಗಿಸಲು ಕೇಳಿರುತ್ತೇನೆ. ಆಗ ಆರೋಪಿ 15 ದಿನಗಳ ನಂತರ ದಿನಾಂಕ 12-7-2024 ರಂದು ನಿಪಿ1 ನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತಾರೆ. ನಿಪಿ1 ನ್ನು ನೀಡಿದಾಗ ಬೇರೆ ಯಾರು ಹಾಜರು ಇರಲಿಲ್ಲ. ನಿಪಿ1 ರಲ್ಲಿ ಇರುವ ಸಹಿ ಆರೋಪಿಯದ್ದಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಬ್ಯಾಂಕಿನವರು ಸಹ ಸಹಿ ತಾಳೆಯಾಗುತ್ತಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

ಆರೋಪಿಗೆ ಹಣ ನೀಡಿದ ದಿನದಂದು ಯಾವುದೇ ಹಣ ನೀಡಿದ ಬಗ್ಗೆ ದಾಖಲೆ ಮಾಡಿಕೊಂಡಿರುವುದಿಲ್ಲ. ಭದ್ರತೆಗಾಗಿ ಸಹ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ. ಬಾರ್ ನಲ್ಲಿ ಕೆಲಸಕ್ಕೆ ಸೇರುವ ಭದ್ರತೆಗಾಗಿ ಚೆಕ್ ಗಳನ್ನು ಪಡೆಯುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ನಾವು ಆರೋಪಿಯಿಂದ ಭದ್ರತೆಗಾಗಿ ನಿಪಿ-1 ನ್ನು ಪಡೆದಿರುತೇವೆ ಎಂದರೆ ಸರಿಯಲ್ಲ.

ಆರೋಪಿ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಮಾಸಿಕ ರೂ. 15000-00 ಸಂಬಳ ನೀಡುತ್ತಿದ್ದೆವು. ಆ ರೀತಿ ವೇತನ ನೀಡುತ್ತಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ಬಾರಿಗೆ ಸ್ಟಾಕ್ ಗಾಗಿ ಬ್ಯಾಂಕಿಂದ ನಗದು ಹಣವನ್ನು ಡ್ರಾ ಮಾಡುತ್ತೇವೆ ಎಂದರೆ ಸರಿ.

ಆರೋಪಿ ಯಾವ ಗ್ರಾಮಸ್ತ ಎಂದು ನನಗೆ ತಿಳಿದಿರುತ್ತದೆ. ಅವರು ಶಿಕಾರಿಪುರ ತಾಲ್ಲೂಕಿನ ಹರಗಿ ಗ್ರಾಮದವರು ಆಗಿರುತ್ತಾರೆ. ಆರೋಪಿಗೆ ಸಾಕಷ್ಟು ಜಮೀನು ಮತ್ತು ಮನೆ ಇರುತ್ತದೆ ಎಂದರೆ ಗೊತ್ತಿಲ್ಲ. ಆತನಿಗೆ ಸಾಕಷ್ಟು ಜಮೀನು ಮತ್ತು ಆದಾಯ ಇರುವ ಕಾರಣ ನನ್ನ ಬಳಿ ಯಾವುದೇ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಾಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ